ಕರ್ನಾಟಕ ಸರ್ಕಾರ
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**
**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014-15 :** **ದಿನಾಂಕ: 15-12-2014**

**ಪತ್ರಿಕಾ ಪ್ರಕಟಣೆ**

# ಚಂಪಾ ಜೊತೆ ಮನೆಯಂಗಳದಲ್ಲಿ ಮಾತುಕತೆ

ಬೆಂಗಳೂರು :ಡಿಸೆಂಬರ್:15:(ಕರ್ನಾಟಕ ವಾರ್ತೆ):-

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಏರ್ಪಡಿಸಲಾಗುವ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ಸಾಹಿತಿ ಪ್ರೊ. ಚಂದ್ರಶೇಖರ ಪಾಟೀಲ ಅವರು ತಿಂಗಳ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಡಿಸೆಂಬರ್ 20 ರಂದು ಸಂಜೆ 4-00 ಗಂಟೆಗೆ ಕನ್ನಡ ಭವನ ನಯನ ಸಭಾಂಗಣದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 3-00 ಗಂಟೆಯಿಂದ ಬೆಂಗಳೂರಿನ ಶ್ರೀ ಸಿದ್ದರಾಮ ಎಸ್. ಕೇಸಾಪುರ ಇವರಿಂದ ಸುಗಮ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಣೆ ತಿಳಿಸಿದೆ.

ಸಮ/ಕೆಎಂ

# ನಕಲಿ ಮದ್ಯ ತಯಾರಿಕೆ: ಕಠಿಣ ಸಜೆ

ಬೆಂಗಳೂರು :ಡಿಸೆಂಬರ್:15:(ಕರ್ನಾಟಕ ವಾರ್ತೆ):-

ನವೆಂಬರ್ -2014 ರ ಮಾಹೆಯಲ್ಲಿ 2 ಅಬಕಾರಿ ಪ್ರಕರಣಗಳಲ್ಲಿ ಸಿ.ಜೆ.ಎಂ. ನ್ಯಾಯಾಲಯ ಗ್ರಾಮಾಂತರ ಜಿಲ್ಲೆ, ಬೆಂಗಳೂರು ನ್ಯಾಯಾಲಯವು ಆರೋಪಿಗಳಿಗೆ ಶಿಕ್ಷೆ ವಿಧಿಸಿ ಆದೇಶಿಸಿದೆ.

ಎರಡು ವರ್ಷಗಳ ಹಿಂದ ಜೆ.ಪಿ. ನಗರದ ವಲಯ ವ್ಯಾಪ್ತಿಯಲ್ಲಿ ಅಕ್ರಮ ಮದ್ಯಸಾರ ಮತ್ತು ಕಚ್ಚಾವಸ್ತುಗಳ ದಾಸ್ತಾನು ಹೊಂದಿ, ನಕಲಿ ಮದ್ಯ ತಯಾರಿಕೆ ಘಟಕದ ಮೇಲೆ ಅಬಕಾರಿ ಇಲಾಖೆಯು ದಾಳಿ ನಡೆಸಿ, ಪ್ರಕರಣ ದಾಖಲಿಸಿತ್ತು. ಇದರಲ್ಲಿ ಸುಮಾರು 5000 ಲೀ ಮದ್ಯಸಾರ ನಕಲಿ ಮದ್ಯ ಹಾಗೂ ನಕಲು ಮದ್ಯ ತಯಾರಿಕ ಘಟಕವನ್ನು ಅಬಕಾರಿ ಅಧಿಕಾರಿಗಳು ಜೆ.ಪಿ. ನಗರ ವಲಯ ವ್ಯಾಪ್ತಿಯಲ್ಲಿ ಪತ್ತೆ ಮಾಡಿ ಪ್ರಕರಣ ದಾಖಲಿದ್ದರು. ಈ ಪ್ರಕರಣದಲ್ಲಿ ನ್ಯಾಯಾಲಯವು 7 ಜನ ಆರೋಪಿಗಳಿಗೆ 2 ವರ್ಷ ಕಠಿಣ ಸಜೆ ಮತ್ತು ತಲಾ ರೂ. 11,000/- ದಂಡ ವಿಧಿಸಿದೆ. ಈ ಪ್ರಕರಣವನ್ನು ಶ್ರೀ ಶಿವಕುಮಾರ್, ಅಬಕಾರಿ ನಿರೀಕ್ಷಕರು

ಜೆ.ಪಿ. ನಗರ ವಲಯ ಇವರು ದಾಖಲಿಸಿದ್ದರು. ಶ್ರೀ ಎ. ಅನೀಲ್‌ಕುಮಾರ್, ಅಬಕಾರಿ ನಿರೀಕ್ಷಕರು, ಪದ್ಮನಾಭನಗೆ ವಲಯ, ಇವರು ತನಿಖೆ ನಡೆಸಿ ದೋಷಾರೋಪಣಪಟ್ಟಿ ಸಲ್ಲಿಸಿದ್ದರು.

ಮತ್ತೊಂದು ಪ್ರಕರಣವು ಬನಶಂಕರಿ ವಲಯ ವ್ಯಾಪ್ತಿಗೆ ಸೇರಿರುತ್ತದೆ. ತಲಘಟ್ಟಪುರ ಬಳಿ, ಆಂಜನೇಯಗುಡಿ ರಸ್ತೆಯಲ್ಲಿರುವ ಒಂದು ಮನೆಯಲ್ಲಿ ಅಕ್ರಮ ಮದ್ಯ ಸ್ವಾದೀನ ಇರುವುದನ್ನು ಪತ್ತೆ ಮಾಡಿ ಅಬಕಾರಿ ನಿರೀಕ್ಷಕರು, ಬನಶಂಕರಿ ವಲಯ ಇವರು ಪ್ರಕರಣ ದಾಖಲಿಸಿದ್ದರು. ಈ ಪ್ರಕರಣದಲ್ಲೂ ಸಹ ನ್ಯಾಯಾಲಯವು 2 ಜನ ಆರೋಪಿಗಳಿಗೆ 2 ವರ್ಷ ಕಠಿಂ ಸಜೆ ಮತ್ತು ತಲಾ ರೂ. 11000/- ದಂಡ ವಿಧಿಸಿದೆ. ಈ ಪ್ರಕರಣವು ಶ್ರೀ ಕೆ. ಮೋಹನ, ಅಬಕಾರಿ ನಿರೀಕ್ಷಕರು, ಬನಶಂಕರಿ ವಲಯ ಇವರು ದಾಖಲಿಸಿದ್ದರು. ಶ್ರೀ ಆರ್. ಶ್ರೀನಿವಾಸನ್, ಅಬಕಾರಿ ಉಪ ನಿರೀಕ್ಷಕರು, ಬನಶಂಕರಿ ವಲಯ ಇವರು ತನಿಖೆ ನಡೆಸಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣದ ಸರ್ಕಾರಿ ಹಿರಿಯ ಅಭಿಯೋಜನ ಶ್ರೀ ವಿಜಯಕುಮಾರ್ ಟಂಕಸಾಲೆ ಇವರು ಸರ್ಕಾರದ ವಾದ ಮಂಡಿಸಿದ್ದರು ಎಂದು ಬೆಂಗಳೂರು ನಗರ ಜಿಲ್ಲೆ (ಪಶ್ಚಿಮ) ಅಬಕಾರಿ ಉಪ ಆಯುಕ್ತ ಶ್ರೀ ಬಿ. ಮಾದೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮ/ಕೆಎಂ

## ನ್ಯಾಯಮೂರ್ತಿ ವಿ.ಆರ್.ಕೃಷ್ಣ ಅಯ್ಯರ್ ಹಾಗೂ ಪತ್ರಕರ್ತ ಎನ್.ಡಿ.ಶಿವಕುಮಾರ ನಿಧನಕ್ಕೆ ಸಂತಾಪ

**ಬೆಳಗಾವಿ:ಡಿಸೆಂಬರ್:15:(ಕರ್ನಾಟಕ ವಾರ್ತೆ):-**

ಪರಿಷತ್ ಕಲಾಪದ ಆರಂಭದಲ್ಲಿ ಇಂದು ನಿಧನರಾದ ನ್ಯಾಯಮೂರ್ತಿ ವಿ.ಆರ್.ಕೃಷ್ಣಮೂರ್ತಿ ಅಯ್ಯರ್ ಹಾಗೂ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ವಿಶೇಷ ವರದಿಗಾರರಾದ ಎನ್.ಡಿ.ಶಿವಕುಮಾರ್ ಅವರಿಗೆ ಸಂತಾಪ ಸೂಚನೆಯನ್ನು ಸಭಾಪತಿ ಹೆಚ್.ಡಿ.ಶಂಕರಮೂರ್ತಿ ಅವರು ಸದನದಲ್ಲಿ ಮಂಡಿಸಿದರು.

ಕೇರಳ ರಾಜ್ಯದ ಕಮ್ಯೂನಿಸ್ಟ ಸರ್ಕಾರದಲ್ಲಿ ಕಾನೂನು ಸಚಿವರಾಗಿ ಸೇವೆ ಸಲ್ಲಿಸಿದ್ದ ವಿ.ಆರ್.ಕೃಷ್ಣಮೂರ್ತಿ ಅಯುರ್ ಅವರು ಭೂ ಸುಧಾರಣೆ ಕಾಯ್ದೆ ಜಾರಿಗೆ ತಂದು ಬಡ ಗೇಣಿದಾರರಿಗೆ ಅನುಕೂಲ ಮಾಡಿಕೊಟ್ಟಿದ್ದರು ಹಾಗೂ ಸುಪ್ರಿಂ ಕೋರ್ಟನ ನ್ಯಾಯಮೂರ್ತಿಯಾಗಿಯೂ ಸೇವೆ ಸಲ್ಲಿಸಿದ್ದರು, ಶ್ರಿಯುತರು ಪದ್ಮಭೂಷಣ ವಿಜೇತರಾಗಿದ್ದರು ಎಂದು ಸಭಾಪತಿಯವರು ಸ್ಮರಿಸಿದರು.

ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ವಿಶೇಷ ವರದಿಗಾರ ಬೆಳಗಾವಿ ಅಧಿವೇಶದ ವರದಿಗಾಗಿ ಬೆಂಗಳೂರಿನಿಂದ ಆಗಮಿಸಿದ್ದ ಎನ್.ಡಿ.ಶಿವಕುಮಾರ್ ಅವರು ಸಜ್ಜನಿಕೆಯ ವರದಿಗಾರರನ್ನು ಕಳೆದುಕೊಂಡಂತಾಗಿದೆ. ಎಂದ ಅವರು ಇಬ್ಬರ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸಿದರು.

ಸಂತಾಪ ಸೂಚನಾ ಮಂಡನೆಗೆ ಸರ್ಕಾರದ ಪರವಾಗಿ ಪರಿಷತ್ ಸಭಾನಾಯಕರಾದ ಎಸ್.ಆರ್.ಪಾಟೀಲ್ ಹಾಗೂ ವಿರೋಧ ಪಕ್ಷದ ನಾಯಕ ಕೆ.ಎಸ್.ಈಶ್ವರಪ್ಪ ಅವರು ನಿಧನದಾರದವರ ಕುರಿತು ಶೋಕ ವ್ಯಕ್ತ ಪಡಿಸಿದರು. ನಂತರ ನಿಮಿಷ ಮೌನವನ್ನು ಆಚರಿಸಿ ಹತ್ತು ನಿಮಿಷಗಳ ಕಾಲ ಸಭೆಯನ್ನು ಮುಂದೂಡಲಾಯಿತು.
*****************

# ಶೀಘ್ರ್ರದಲ್ಲೇ 30 ಜಿಲ್ಲೆಗಳಲ್ಲಿ ಸಿ.ಆರ್.ಸಿ.ಘಟಕ ಸ್ಥಾಪನೆ

**ಬೆಳಗಾವಿ:ಡಿಸೆಂಬರ್:15:(ಕರ್ನಾಟಕ ವಾರ್ತೆ):-**

ಅತಿ ಶೀಘ್ರದಲ್ಲೇ ರಾಜ್ಯದ ಎಲ್ಲಾ 30 ಜಿಲ್ಲೆಗಳ ಕೇಂದ್ರ ಸ್ಥಾನದಲ್ಲಿ ಸಿ.ಆರ್.ಇ. ಸೆಲ್ ಸ್ಥಾಪನೆ ಮಾಡಲಾಗುವುದೆಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಹೆಚ್.ಆಂಜನೇಯ ಅವರು ತಿಳಿಸಿದರು.

ವಿಧಾನ ಪರಿಷತ್ ಇಂದಿನ ಪ್ರಶ್ನೋತರ ಕಲಾಪದಲ್ಲಿ ಸದಸ್ಯರಾದ ತಾರಾ ಅನುರಾಧ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಜನರ ಹಕ್ಕುಗಳ ರಕ್ಷಣೆಗೊಸ್ಕರ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯವನ್ನು ಸ್ಥಾಪನೆ ಮಾಡಿದೆ. ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲಿಸ್ ಅವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿರ್ದೇಶನಾಲಯವು ಪೋಲಿಸ್ ಅಧೀಕ್ಷಕರ ಮೇಲ್ವಿಚಾರಣೆಯಲ್ಲಿ ರಾಜ್ಯದ 7 ವಲಯಗಳಲ್ಲಿ ಪ್ರಾದೇಶಿಕ ಕಚೇರಿಯನ್ನು ಹೊಂದಿದೆ. ನಿರ್ದೇಶನಾಲಯಕ್ಕೆ ಅಪರಾಧಿಯ ಮೇಲೆ ಎಫ್.ಐ.ಆರ್. ಹಾಕಲು ಅಧಿಕಾರವಿಲ್ಲದೇ ಇರುವುದರಿಂದ ನಿರ್ದೇಶನಾಲಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವಂತೆ ಮಾಡುವ ಉದ್ದೇಶದಿಂದ ಪ್ರತಿ ಜಿಲ್ಲೆಯಲ್ಲೊಂದು ಘಟಕವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ ಎಂದರು.

ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯವನ್ನು ಬಲಗೊಳಿಸಿ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ನೌಕರಿಯನ್ನು ಪಡೆಯುವ ಮೂಲಕ ಅರ್ಹ ಅಭ್ಯರ್ಥಿಗಳನ್ನು ವಂಚಿಸುತ್ತಿರುವವರ ಮೇಲೆ ಸೂಕ್ತ ಕಠಿಣ ಕ್ರಮ ಕೈಗೊಳ್ಳುವ ಉದ್ದೇಶದಿಂದ ಪೋಲೀಸ್ ಇಲಾಖೆ ಹಾಗೂ ಕೆ.ಪಿ.ಟಿ.ಸಿ.ಎಲ್. ನಲ್ಲಿರುವಂತೆ 30 ಜಿಲ್ಲೆಗಳಿಗೂ ಸಿ.ಆರ್.ಇ. ಘಟಕ ಸ್ಥಾಪನೆ ಮಾಡಿ ಅಪರಾಧಿಯ ಮೇಲೆ ಕೂಡಲೇ ಎಫ್.ಐ.ಆರ್ ದಾಖಲಿಸಲು ಅಧಿಕಾರವನ್ನು ನೀಡುವ ಮೂಲಕ ಘಟಕವನ್ನು ಬಲಪಡಿಸಲಾಗುವುದು.

ಅದಕ್ಕಾಗಿ ಈಗಾಗಲೇ ಗೃಹ ಹಾಗೂ ಕಾನೂನು ಇಲಾಖೆಯೊಂದಿಗೆ ಪತ್ರ ವ್ಯವಾಹರ ನಡೆಸಲಾಗಿದೆಯಂದು ಸಚಿವರು ಮಾಹಿತಿ ನೀಡಿದರು.

ಆರು ತಿಂಗಳಲ್ಲಿ ಕ್ರಮ: ಸುಳ್ಳು ಜಾತಿ ಪ್ರಮಾಣ ಪ್ತರದ ಮೇಲೆ ನೌಕರಿ ಪಡೆದಿರುವವರ ವಿರುದ್ಧ ಮುಂದಿನ ಆರು ತಿಂಗಳಲ್ಲಿ ಕ್ರಮ ಜರುಗಿಸಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪರಿಷತ್‌ನಲ್ಲಿ ಭರವಸೆ ನೀಡಿದರು.

ಪರಿಷತ್ ತಾರಾ ಅವರ ಪ್ರಶ್ನೆಗೆ ಉತ್ತರಿಸುತ್ತಾ ಸಚಿವರು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು 702 ಮಂದಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಂದು ಸಭೆಗೆ ಮಾಹಿತಿ ನೀಡಿದ ಕೂಡಲೇ ಪ್ರತಿ ಪಕ್ಷದ

ನಾಯಕ ಈಶ್ವರಪ್ಪ ಹಾಗೂ ಸದಸ್ಯರು ಅಂತವರ ವಿರುದ್ದಕ್ರಮ ಜರುಗಿಸುವಂತೆ ಪಟ್ಟುಹಿಡಿದರು. ಕಾರಣ ಮಧ್ಯ ಪ್ರವೇಶಿಸಿದ ಮುಖ್ಯಮಂತ್ರಿಯವರು ಸುಳ್ಳು ಜಾತಿ ಪ್ರಮಾಣ ಪತ್ರದಡಿ ನೌಕರಿ ಹೋಂದಿರುವ 702 ಮಂದಿಯ ವಿರುದ್ದ ಗಂಬೀರವಾಗಿ ಪರಿಶೀಲನೆ ನಡೆಸಿ ಇನ್ನು 6 ತಿಂಗಳಲ್ಲಿ ಅವರ ಮೇಲೆ ಕ್ರಮ ಜರುಗಿಸಲಾಗುವುದೆಂದು ಭರವಸೆ ನೀಡಿದರು.

ಹಾಗೆಯೇ ತಾವು ಕಲಿತ ಶಾಲೆಯಿಲ್ಲಿ ದಲಿತ ಮಹಿಳೆಯೊಬ್ಬರು ಅಡಿಗೆ ಮಾಡುತ್ತಿರುವುದರಿಂದ ಕೆಲವು ಮಕ್ಕಳು ಊಟ ಸೇವಿಸುತ್ತಿಲ್ಲವೆಂದು. ಮಾಧ್ಯಮದಲ್ಲಿ ವರದಿಯಾಗಿರುವುದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಯವರು ನಾಗರೀಕ ಸಮಾಜ ತಲೆತಗ್ಗಿಸುವಂತ ಕೆಲಸವನ್ನು ಉದ್ದೇಶ ಪೂರ್ವಕವಾಗಿ ಮಾಡಲಾಗಿತ್ತು. ಸಚಿವರಾದ ಶ್ರೀನಿವಾಸ್ ಪ್ರಸಾದ್ ಅವರು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಯನ್ನು ತಿಳಿಗೊಳಿಸಿದ್ದಾರೆ. ಮಕ್ಕಳು ಬಿಸಿ ಊಟವನ್ನು ಸೇವಿಸುತ್ತಿದ್ದಾರೆ ಎಂದು ತಿಳಿಸಿದರು.

***********************

## ಚಿನ್ನ, ಬೆಳ್ಳಿ ಗುಣಮಟ್ಟ ಖಾತ್ರಿಗೆ ಕಾಯ್ದೆ ತಿದ್ದುಪಡಿ: ದಿನೇಶ್ ಗುಂಡೂರಾವ್

**ಬೆಳಗಾವಿ:ಡಿಸೆಂಬರ್:15:(ಕರ್ನಾಟಕ ವಾರ್ತೆ):-**

ಚಿನ್ನ ಮತ್ತು ಬೆಳ್ಳಿ ಗುಣಮಟ್ಟವನ್ನು ಖಾತ್ರಿಪಡಿಸಲು ಸಾಧ್ಯವಾಗುವಂತೆ ಈಗಿರುವ ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ಕ್ರಮ ಕೈಗೊಳ್ಳಲಾಗುವುದು ಎಂದು ಆಹಾರ ಸರಬರಾಜು ಹಾಗೂ ನಾಗರಿಕ ವ್ಯವಹಾರಗಳ ಖಾತೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಅವರು ಸೋಮವಾರ ವಿಧಾನ ಪರಿಷತ್‌ನಲ್ಲಿ ಸದಸ್ಯ ದಯಾನಂದ ಇವರ ಪ್ರಶ್ನೆಗೆ ಉತ್ತರಿಸುತ್ತಾ, ಪ್ರಸ್ತುತ ಇರುವ ಕಾಯ್ದೆಯಲ್ಲಿ ತೂಕ ಖಾತ್ರಿಪಡಿಸಲು ಗ್ರಾಹಕರಿಗೆ ಈ ವಿಷಯವಾಗಿ ನ್ಯಾಯ ಒದಗಿಸಲು ಅವಕಾಶವಿದೆ. ಆದರೆ ಚಿನ್ನ ಮತ್ತು ಬೆಳ್ಳಿಯ ಗುಣಮಟ್ಟವನ್ನು ಖಾತ್ರಿಪಡಿಸಲು ಅವಕಾಶವಿರುವುದಿಲ್ಲ. ಇದು ಕೇಂದ್ರ ಹಾಗೂ ರಾಜ್ಯ ಸರ್ಕಾರ ಎರಡಕ್ಕೂ ಸಂಬಂಧಿಸಿದ್ದು, ಈ ಕುರಿತಾಗಿ ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲಾಗುವುದು ಎಂದು ಉತ್ತರಿಸಿದರು.

<u>ಗಣಕೀಕೃತ ತೂಕದ ಯಂತ್ರ:</u> ಕೇಂದ್ರ ಸರ್ಕಾರ ನ್ಯಾಯಬೆಲೆ ಅಂಗಡಿಗಳಲ್ಲಿ ಇ ಪಡಿತರ ಯಂತ್ರಗಳನ್ನು ಅಳವಡಿಸುವ ಕುರಿತಂತೆ ಹೊಸ ನೀತಿಯನ್ನು ಜಾರಿಗೊಳಿಸಲು ಪರಿಶೀಲನೆ ನಡೆಸುತ್ತಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇ ಪಡಿತರ ಯಂತ್ರಗಳನ್ನು ಅಳವಡಿಸಲಾಗುವುದು ಎಂದು ಸಚಿವ ದಿನೇಶ್ ಗುಂಡೂರಾವ್ ಸದಸ್ಯ ಜಿ.ಎಸ್.ನ್ಯಾಮೇಗೌಡ ಅವರ ಪ್ರಶ್ನೆಗೆ ಉತ್ತರಿಸಿದರು.

ರಾಜ್ಯದ 7ಜಿಲ್ಲೆಗಳಲ್ಲಿ ಈಗಾಗಲೆ 3514 ಗಣಕೀಕೃತ ತೂಕದ ಯಂತ್ರಗಳನ್ನು ಹಿಂದಿನ ಸರ್ಕಾರ ಅಳವಡಿಸಿದ್ದು, ತಾಂತ್ರಿಕ ಲೋಪದಿಂದ ಕೆಲವೆಡೆ ತೊಂದರೆಯಾಗಿದೆ. ಈ ಯಂತ್ರಗಳ ಲೋಪಗಳನ್ನು ಸರಿಪಡಿಸಿ ಆಧುನಿಕ ಇ ಪಡಿತರ ಯಂತ್ರಗಳನ್ನು ಸರ್ಕಾರ ಅಳವಡಿಸಲು ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

## ಅಲೆಮಾರಿಗಳಿಗೆ ಸರ್ಕಾರದಿಂದ ವಿಶೇಷ ಸೌಲಭ್ಯ:

## ಸಚಿವ ಎಚ್.ಆಂಜನೇಯ

**ಬೆಳಗಾವಿ:ಡಿಸೆಂಬರ್:15:(ಕರ್ನಾಟಕ ವಾರ್ತೆ):-**

ರಾಜ್ಯದ ಅಲೆಮಾರಿ, ಅರೆ ಅಲೆಮಾರಿ ಹಾಗೂ ಗೊಲ್ಲರ ಹಟ್ಟಿಯ ಆರ್ಥಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಸರ್ಕಾರ ವಿಶೇಷ ಕಾಳಜಿಯನ್ನು ಹೊಂದಿದ್ದು, ಅವರ ಅಭಿವೃದ್ಧಿಗೆ ಬಜೆಟ್‌ನಲ್ಲಿ 50ಕೋಟಿ ರೂ. ಅನುದಾನ ಒದಗಿಸಲಾಗಿದೆ ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ಖಾತೆ ಸಚಿವ ಎಚ್.ಆಂಜನೇಯ ಹೇಳಿದರು.

ಅವರು ಸೋಮವಾರ ಸದಸ್ಯೆ ಜಯಮ್ಮ ಅವರ ಪ್ರಶ್ನೆಗೆ ಉತ್ತರಿಸಿ, ಸರ್ಕಾರ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಮಕ್ಕಳಿಗೆ ವಸತಿ ಶಾಲೆಗಳಲ್ಲಿ ಮುಕ್ತ ಪ್ರವೇಶಾವಕಾಶ ಕಲ್ಪಿಸಿದೆ. ಒಂದು ಕುಟುಂಬದಲ್ಲಿ ಎಷ್ಟೇ ಮಕ್ಕಳಿದ್ದರೂ, ಎಲ್ಲರಿಗೂ ವಸತಿ ಶಾಲೆಗಳಲ್ಲಿ ಪ್ರವೇಶ ಒದಗಿಸಲಾಗುತ್ತಿದೆ. ಇದಲ್ಲದೆ ವಸತಿ ಶಾಲೆಯಲ್ಲಿ ಪ್ರವೇಶ ಬಯಸದ ಮಕ್ಕಳಿಗೆ ವಿದ್ಯಾಶ್ರೀ ಯೋಜನೆಯಡಿ ಒಂದು ಸಾವಿರದ ಐದುನೂರು ರೂ. ವಿದ್ಯಾರ್ಥಿ ವೇತನ ನೀಡುವುದರ ಮೂಲಕ ಅವರ ಶೈಕ್ಷಣಿಕ ಬೆಳವಣಿಗೆಗೆ ಆದ್ಯತೆ ನೀಡಿದೆ ಎಂದು ಹೇಳಿದರು.

ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ನಿವೇಶನ ಮತ್ತು ವಸತಿ ರಹಿತರಿಗೆ ನಿವೇಶ ಒದಗಿಸುವುದು, ಗುಡಿಸಲು ತೆಗೆದು ಮನೆ ನಿರ್ಮಾಣ ಮಾಡಿಕೊಡುವುದರ ಮೂಲಕ ಶಾಶ್ವತವಾಗಿ ನೆಲೆ ನಿಲ್ಲುವಂತೆ ಮಾಡಲು ನೆರವು ಒದಗಿಸುತ್ತಿದೆ. ಭೂರಹಿತರಿಗೆ ಭೂಮಿ ಖರೀದಿಸಲು ಸರ್ಕಾರ ನೆರವು ನೀಡಿದೆ. ಈಗಾಗಲೇ ಭೂಮಿ ಹೊಂದಿದವರಿಗೆ ಕೃಷಿಗೆ ಅನುಕೂಲ ಮಾಡಿಕೊಡಲು ಗಂಗಾಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ನಿರ್ಮಾಣಕ್ಕೆ ನೆರವು ಒದಗಿಸಿ, ನೀರಾವರಿ ಸೌಕರ್ಯ ಕಲ್ಪಿಸಲಾಗುತ್ತಿದೆ ಎಂದು ಹೇಳಿದರು.

ಗೊಲ್ಲರ ಹಟ್ಟಿಗಳಿಗೆ ವಿಶೇಷ ಮೂಲಸೌಕರ್ಯಗಳು, ಶೈಕ್ಷಣಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಆದ್ಯತೆ ನೀಡಲಾಗಿದೆ ಎಂದು ಉತ್ತರಿಸಿದರು.

********************

## ಕೆಪಿಎಸ್‌ಸಿ ಮೂಲಕ 1400 ವೈದ್ಯ ಹುದ್ದೆ ಭರ್ತಿಗೆ ಕ್ರಮ:

## ಸಚಿವ ಶರಣ ಪ್ರಕಾಶ್ ಪಾಟೀಲ

**ಬೆಳಗಾವಿ:ಡಿಸೆಂಬರ್:15:(ಕರ್ನಾಟಕ ವಾರ್ತೆ):-**

ರಾಜ್ಯದಲ್ಲಿ ಖಾಲಿಯಿರುವ ಹುದ್ದೆಗಳ ಪೈಕಿ 1401 ವಿವಿಧ ವೈದ್ಯ ಹುದ್ದೆಗಳನ್ನು ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಮಹಾಂತೇಶ್ ಕೌಜಲಗಿ ಅವರ ಪ್ರಶ್ನೆಗೆ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರ ಪರವಾಗಿ ಉತ್ತರ ನೀಡಿದ ಅವರು, 980 ತಜ್ಞ ವೈದ್ಯರು, 331 ಸಾಮಾನ್ಯ ವೈದ್ಯರು ಹಾಗೂ 87 ದಂತ ವೈದ್ಯರ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ ಎಂದರು.

ಈ ಸಂದರ್ಭದಲ್ಲಿ ಮೇಲ್ಮನೆಯ ವಿರೋಧ ಪಕ್ಷದ ನಾಯಕ ಕೆ.ಎಸ್.ಈಶ್ವರಪ್ಪ ಮಾತನಾಡಿ, ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಹಾಗೂ ಆರು ಸದಸ್ಯರ ಹುದ್ದೆಗಳು ಖಾಲಿಯಿದ್ದು, ಈ ಹುದ್ದೆಗಳನ್ನು ಭರ್ತಿ ಮಾಡದಿರುವುದರಿಂದ ನೇಮಕಾತಿ ಪ್ರಕ್ರಿಯೆಗಳಿಗೆ ಹಿನ್ನಡೆಯುಂಟಾಗಿದೆ. ತಕ್ಷಣ ಈ ಕುರಿತು ಕ್ರಮ ವಹಿಸುವಂತೆ ಒತ್ತಾಯಿಸಿದರು. ಇದಕ್ಕೆ ಉತ್ತರಿಸಿದ ಮೇಲ್ಮನೆ ನಾಯಕರಾದ ಐಟಿ, ಬಿಟಿ ಸಚಿವ ಎಸ್.ಆರ್.ಪಾಟೀಲ್ ಅವರು, ಲೋಕಸೇವಾ ಆಯೋಗದ ಅಧ್ಯಕ್ಷ ಹಾಗೂ ಸದಸ್ಯರ ಹುದ್ದೆ ಭರ್ತಿಗೆ ಸರ್ಕಾರ ನಿರ್ಧಾರ ಕೈಗೊಂಡಿದೆ. ಆದಷ್ಟು ಬೇಗನೆ ನೇಮಕಾತಿ ನಡೆಯಲಿದೆ ಎಂದು ಹೇಳಿದರು.

<u>ಗ್ರಾಮೀಣ ಸೇವೆ ಕಡ್ಡಾಯ:</u> ಗ್ರಾಮೀಣ ಪ್ರದೇಶದಲ್ಲಿ ವೈದ್ಯರ ಕೊರತೆಯನ್ನು ತಪ್ಪಿಸಲು, ಎರಡು ವರ್ಷಗಳ ಗ್ರಾಮೀಣ ಸೇವೆಯನ್ನು ಕಡ್ಡಾಯಗೊಳಿಸಿ ಸರ್ಕಾರ ಈಗಾಗಲೇ ಕಾಯ್ದೆ ರೂಪಿಸಿದೆ. ಆದರೆ ಈ ಕಾಯ್ದೆಗೆ ರಾಷ್ಟ್ರಪತಿಯವರ ಅಂಕಿತವಾಗಬೇಕಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

***************

## ತಾಯಿ ಭಾಗ್ಯ ಯೋಜನೆಯ ಮಕ್ಕಳ ಮಿತಿ ಸಡಿಲಿಕೆ: ಸಚಿವ ಶರಣ ಪ್ರಕಾಶ್

ಬೆಳಗಾವಿ:ಡಿಸೆಂಬರ್:15:(ಕರ್ನಾಟಕ ವಾರ್ತೆ):-

ಮುಂದಿನ ವರ್ಷದಿಂದ ತಾಯಿ ಭಾಗ್ಯ ಯೋಜನೆಯಡಿ ನೆರವು ಪಡೆಯಲು ವಿಧಿಸಿರುವ ಎರಡು ಮಕ್ಕಳ ಮಿತಿಯನ್ನು ಸಡಿಲಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ವೀರಣ್ಣ ಮತ್ತಿಕಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹಿಂದುಳಿದ ಜಿಲ್ಲೆಗಳಾದ ಯಾದಗಿರಿ, ರಾಯಚೂರು, ಬಿಜಾಪುರ, ಕೊಪ್ಪಳ, ಗುಲ್ಬರ್ಗಾ, ಬೀದರ್, ಬಾಗಲಕೋಟೆ, ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರಸೂತಿ ಆರೈಕೆ ಹಾಗೂ ಮಡಿಲು ಕಾರ್ಯಕ್ರಮಕ್ಕೆ ವಿಧಿಸಲಾಗಿದ್ದ ಬಿಪಿಎಲ್.ಎಸ್‌ಸಿ, ಎಸ್‌ಟಿ ಹಾಗೂ ಎರಡು ಜೀವಂತ ಜನನಕ್ಕೆ ಎಂಬ ಷರತ್ತನ್ನು ಸಡಿಲಿಸಿ ಎಲ್ಲ ಫಲಾನುಭವಿಗಳಿಗೂ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ. ಇದನ್ನು ಅನುಷ್ಟಾನಗೊಳಿಸಲು ಹಾಗೂ ಇದನ್ನು ರಾಜ್ಯದ ಉಳಿದ ಎಲ್ಲಾ ಜಿಲ್ಲೆಗಳಿಗೂ ಮುಂದಿನ ವರ್ಷದಿಂದ ವಿಸ್ತರಿಸಲಾಗುವುದು ಎಂದು ಹೇಳಿದರು.